(ii) ವಿಷಯ :—ರೇಷ್ಮೆ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ತಾತ್ಕಾಲಿಕ ವಿಸ್ತರಣಾ ನೌಕರರ ಹಾಗೂ ಇತರರ ಸೇವೆಗಳನ್ನು ಕ್ರಮ ಗೊಳಿಸುವ ಬಗ್ಗೆ :—

ಶ್ರೀ ವೈ. ರಾಮಕೃಷ್ಣ.— ಮಾನ್ಯ ಅಧ್ಯಕ್ಷರೇ, ರೇಷ್ಮೆ ಇಲಾಖೆಯಲ್ಲಿ ಹಂಗಾಮಿ ವಿಸ್ತರಣಾ ಕೆಲಸಗಾರರು ಮತ್ತು ಇತರರ ಸೇವೆಯನ್ನು ಕ್ರಮಬದ್ಧಗೊಳಿಸುವ ವಿಷಯವಾಗಿ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀಮತಿ ಚಂದ್ರ ಪ್ರಭ ಅರಸು(ಮಾನ್ಯ ಸಮಾಜ ಕಲ್ಯಾಣ ಮತ್ತು ರೇಷ್ಮೆ ಸಚಿವರು). —ಅಧ್ಯಕ್ಷರೆ. ರೇಷ್ಮೆ ಇಲಾಖೆಯಲ್ಲಿ ಕಳೆದ ೧೦–೧೫ ವರ್ಷಗಳಿಂದ ಕೆಲಸ ಮಾಡುತ್ತಿರುವ ಹಂಗಾಮಿ ವಿಸ್ತರಣಾ ಕೆಲಸಗಾರರು ಇರುವುದಿಲ್ಲ. ಆದಾಗ್ಯೂ, ಇಲಾಖೆಯ ಸರ್ಕಾರಿ ರೇಷ್ಮೆ ಕೇಂದ್ರಗಳು, ರೇಷ್ಮೆ ಬಿತ್ತನೆ ಕೋಠಿಗಳು ಮತ್ತು ಗೂಡಿನ ಮಾರುಕಟ್ಟೆಗಳಲ್ಲಿ ಕಳೆದ ೧೦–೧೫ ವರ್ಷಗಳಿಂದ ಕುಶಲಕರ್ಮಚಾರಿಗಳು ಮತ್ತು ಕುಶಲಿಕರಲ್ಲದ ಸಾಮಾನ್ಯ ಕೆಲಸಗಾರರು ಕೆಲಸ ಮಾಡುತ್ತಲಿದ್ದಾರೆ. ಸಾಮಾನ್ಯವಾಗಿ, ಈ ಕೆಲಸಗಾರರನ್ನು ಇಲಾಖೆಯ ಸಿಬ್ಬಂದಿಯವರಿಗೆ ರೇಷ್ಮೆ ಹುಳು ಸಾಕುವುದು ಮತ್ತು ರೇಷ್ಮೆ ಬಟ್ಟೆ ಆರಿಸುವುದು. ಗೂಡಿನ ಮಾರುಕಟ್ಟೆಗಳಲ್ಲಿ ಹರಾಜು ನಡೆಸುವುದು ಮತ್ತು ತೂಕಮಾಡುವುದೇ ಇತ್ಯಾದಿ ಕೆಲಸಗಳಿಗೆ ಸಹಾಯಮಾಡಲು ನೇಮಿಸಿಕೊಳ್ಳಲಾಗುತ್ತದೆ. ಈ ಕೆಲಸಗಾರರು ಸಾಂಧರ್ಭಿಕ ಕರ್ಮಚಾರಿಗಳೆಂದು ನೇಮಿಸಿಕೊಳ್ಳಲಾಗುವರು ಮತ್ತು ಅವರಿಗೆ ಸರ್ಕಾರದಿಂದ ಕಾಲಕಾಲಕ್ಕೆ ನಿಗದಿ ಪಡಿಸಿದಂತೆ ಕನಿಷ್ಠ ವೇತನ ಖಾಯಿದೆಯ ಪ್ರಕಾರ ದಿನ ಭತ್ಯವನ್ನು ಕೊಡಲಾಗುತ್ತದೆ. ಆವರ ದಿನ ನಿತ್ಯದ ಹಾಜರಿಯನ್ನು ನಿಯಮಿತ ಹಾಜರಿಪಟ್ಟಿಯಲ್ಲಿ ದಾಖಲು ಮಾಡಿಕೊಂಡು ಪ್ರತಿ ತಿಂಗಳು ದಿನ ನಿತ್ಯದ ವೇತನ ನೀಡಲಾಗುತ್ತಿದೆ ಹಾಗೂ ರಜಾದಿನಗಳು ಮತ್ತು ಅಸ್ವಸ್ಥ ರಜೆ ಸೌಲಭ್ಯಗಳನ್ನು ಕೊಡಲಾಗುತ್ತಿದೆ. ಈ ಕೆಲಸಗಾರರನ್ನು ಸರ್ಕಾರಿ ಕೃಷಿಕೇಂದ್ರಗಳಲ್ಲಿ, ಬಿತ್ತನೆಕೋಠಿಗಳಲ್ಲಿ ಮತ್ತು ಗೂಡಿನ ಮಾರುಕಟ್ಟೆಗಳಲ್ಲಿ ಆಯಾ ಕೇಂದ್ರಗಳ ಕೆಲಸದ ಭಾರದ ಮೇಲೆ ಅವಲಂಬಿಸಿ ಸಾಂಧರ್ಬಿಕವಾಗಿ ಕನಿಷ್ಠ ವೇತನ ಖಾಯಿದೆಯ ಪ್ರಕಾರ ನೇಮಿಸಿಕೊಳ್ಳುತ್ತಿರುವುದರಿಂದ ಇವರ ಸೇವೆಯನ್ನು ಕ್ರಮ ಬದ್ಧಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ವೈ. ರಾಮಕೃಷ್ಣ.—ಮಾನ್ಯ ಅಧ್ಯಕ್ಷರೇ, ಇದು ಸತ್ಯಕ್ಕೆ ಬಹಳ ದೂರವಾದಂಥ ಹೇಳಿಕೆಯಾಗಿದೆ. ಪತ್ತು– ಹದಿನೈದು ವರ್ಷಗಳಿಂದ ಅವರು ಕೆಲಸ ಮಾಡುತ್ತಿಲ್ಲವೆಂದು ಮಂತ್ರಿಗಳು ಹೇಳಿದರು. ಅವರು ಎಲ್ಲಾ ಅಂಶಗಳನ್ನೂ ಹೇಳಬಹುದಾಗಿತ್ತು. ಎಷ್ಟು ವರ್ಷಗಳಿಂದ ಈ ಹಂಗಾಮಿ ಕೆಲಸಗಾರರು ಕೆಲಸ ಮಾಡುತ್ತಿದ್ದಾರೆ. ಯಾವತ್ತು ಅವರ ನೇಮಕವಾಯಿತು. ಎಲ್ಲಿ ಏನೇನು ಸೌಲಭ್ಯಗಳನ್ನು ಅವರಿಗೆ ಕೊಡುತ್ತಾ ಇದ್ದಾರೆ ಅವರಿಗೆ ಎಷ್ಟು ಸಂಬಳ ಕೊಡುತ್ತಿದ್ದಾರೆ, ಅವರಿಗೆ ಕೊಡತಕ್ಕಂಥ ದಿನಗೂಲಿ ಏನು, ಯಾವ ಯಾವ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿದ್ದಾರೆ, ಎಷ್ಟು ಗಂಟೆ ಕಾಲ ಕೆಲಸ ಮಾಡುತ್ತಿದ್ದಾರೆ ಎಂದೆಲ್ಲಾ ತಿಳಿಸಬಹುದಾಗಿತ್ತು. ನಾನು ಹೇಳುತ್ತೇನೆ, ಇದು ಮಾನವೀಯತೆಯ ಪ್ರಶ್ನೆ. ಈ ಕೆಲಸಗಾರರು ಎಂಟು–ಹತ್ತು ವರ್ಷಗಳಿಂದ ಹದಿನೈದು ವರ್ಷಗಳವರೆಗೂ ಕೆಲಸ ಮಾಡುತ್ತಿದ್ದಾರೆ. ಅವರಲ್ಲಿ ಶೇಕಡಾ ೮೦ ರಷ್ಟು ಜನ ಎಸ್.ಎಸ್.ಎಲ್.ಸಿ ಪಾಸ್ ಮಾಡಿದ್ದಾರೆ. ಎಸ್.ಎಸ್.ಎಲ್.ಸಿ ಯಿಂದ ಹಿಡಿದು ಡಿಗ್ರಿ ತನಕ ಕೆಲವರು ಓದಿದ್ದಾರೆ. ಜೊತೆಗೆ ಅವರಿಗೆ ಕೊಟ್ಟಿರುವ ಕಷ್ಟದ ಕೆಲಸ ಏನೆಂದರೆ ಚಾಕಿ ಕೇಂದ್ರಗಳಲ್ಲಿ ಹುಳುಗಳ ಸಂರಕ್ಷಣೆ ಮಾಡುವುದು. ಅವರು ಗ್ರಾಮಗಳಿಗೆ ಭೇಟಿ ಕೊಡಬೇಕು, ವಿಸ್ತರಣಾ ವಿಚಾರದಲ್ಲಿ ರೈತರಿಗೆ ತಿಳುವಳಿಕೆ ಕೊಡಬೇಕು, ಕಾಲ್ನಡಿಗೆಯಲ್ಲೇ ಟಿಎ, ಡಿಎ ಇಲ್ಲದೆ ಓಡಾಡಿ. ಬೆಳಿಗ್ಗೆ ನಾಲ್ಕು ಗಂಟೆಯಿಂದ ರಾತ್ರಿ ಹನ್ನೆರಡು ಗಂಟೆಯವರೆಗೆ ಹುಳುಗಳನ್ನು ಸಾಕಬೇಕು. ಹುಳುಗಳಿಗೆ ಕಾಲಕ್ಕೆ ಸರಿಯಾಗಿ ಆಹಾರ ಕೊಡಬೇಕು. ಇಲ್ಲದಿದ್ದರೆ ಅವು ಸತ್ತು ಹೋಗುತ್ತವೆ, ಇಷ್ಟು ಜವಾಬ್ದಾರಿಯುತವಾದ ಕೆಲಸವನ್ನು ಇಷ್ಟು ವರ್ಷಗಳ ಕಾಲ ಇವರುಗಳ ಕೈಯಿಂದ ಮಾಡಿಸಿಕೊಂಡು, ಈಗ ಸುಮಾರು ಎರಡು ಸಾವಿರ ಜನರಿಗೆ, ಸುಮಾರು ನೂರಕ್ಕೆ ಎಂಬತ್ತರಷ್ಟು ಜನರಿಗೆ ವಯೋಮಿತಿ ಮೀರಿಹೋಗಿದೆ, ಇವರನ್ನು ಮನೆಗೆ ಕಳಿಸಿದರೆ ಮಾನವೀಯತೆ ಉಳಿದಿದೆಯೇ ಎಂದು ನಾನು ಕೇಳುತ್ತೇನೆ. ಈ ಪ್ರಶ್ನೆ ನಾನು

ಟ್ರೆಜರಿ ಬೆಂಚ್‌ನಲ್ಲಿ ಇದ್ದಾಗಲೂ ಬಂದಿತ್ತು, ಇದನ್ನು ನಾವು ಗಮನಿಸಿ ಆರುನೂರು ಹುದ್ದೆಗಳನ್ನು ಈ ಇಲಾಖೆಯಲ್ಲಿ ನಿರ್ಮಾಣ ಮಾಡಿದ್ದೆವು. ಅವರಲ್ಲಿ ಡೆಮಾನ್‌ಸ್ಟ್ರೇಟರ್ ಹುದ್ದೆಗಳು ಸೇರಿವೆ. ಆದರೆ ಯಾರನ್ನೂ ಈ ಹುದ್ದೆಗಳಲ್ಲಿ ಖಾಯಂ ಗೊಳಿಸಿಲ್ಲ.

ಒಬ್ಬರು ಮಾನ್ಯ ಸದಸ್ಯರು.—ಅಂತಾದ್ದೇನೂ ಇಲ್ಲ.

† ಶ್ರೀ ವೈ. ರಾಮಕೃಷ್ಣ.—ನಾನು ಮಾಡಿರುವ ಭಾಷಣ ರೆಕಾರ್ಡ್‌ನಲ್ಲಿದೆ. ಆರುನೂರು ಜನ ಡೆಮಾನ್‌ಸ್ಟ್ರೇಟರ್‌ಗಳನ್ನು ತೆಗೆದುಕೊಂಡಿದ್ದಾರೆ, ಅವರ ಪೈಕಿ ಒಬ್ಬರಿಗೂ ಕೂಡ ಈ ಸೇವೆಯನ್ನು ಮಾಡಿಸಿಕೊಂಡವರಿಗೆ ಸಿಕ್ಕಿಲ್ಲ. ಅವರ ಗತಿ ಏನಾಗಬೇಕು. ಅವರ ಭವಿಷ್ಯ ಏನಾಗಬೇಕು ? ಅದರಲ್ಲೂ ಹೆಣ್ಣು ಮಕ್ಕಳಿಗೆ ಮುನ್ನೂರು ರೂಪಾಯಿ ಕೊಡುತ್ತಿದ್ದಾರೆ. ಗಂಡು ಹುಡುಗರಿಗೆ ಸಿಗುವುದು ಬರೇ ಇನ್ನೂರು ರೂಪಾಯಿ ಸಂಬಳ.

ಅವರು ಮಾಡಿರತಕ್ಕಂಥಾ ಸರ್ವೀಸಸ್ ನೋಡಿದರೆ ೧೦ ವರ್ಷವಾಗಿದೆ. ಜೊತೆಗೆ ವಿದ್ಯಾವಂತರು. ಆದುದರಿಂದ ಇದನ್ನು ಅಷ್ಟು ಸುಲಭವಾಗಿ ತಳ್ಳು ಹಾಕುವಂತಿಲ್ಲ. ಅಲ್ಲದೆ ಅವರು ಸುಮಾರು ೧೦–೧೨ ವರ್ಷಗಳಿಂದಲೂ ಕೂಡ ಚೆನ್ನಾಗಿ ದುಡಿದಿದ್ದಾರೆ ಮುಂದೆಯೂ ದುಡಿಯುತ್ತಿದ್ದಾರೆ. ತಮಗೆ ಹೇಳಬೇಕಾದರೆ ಅವರು ಚೆನ್ನಾಗಿ ದುಡಿದು ಈ ರೇಷ್ಮೆ ಇಲಾಖೆಗೆ ಒಳ್ಳೆಯ ಹೆಸರನ್ನೂ ಸಹ ತಂದಿದ್ದಾರೆ. ಇದನ್ನು ಸರ್ಕಾರ ಗಮನಿಸಿ ಅವರಿಗೆ ಸಂರಕ್ಷಣೆ ಮಾಡಬೇಕು ಎಂದು ಹೇಳುತ್ತೇನೆ. ಜೊತೆಗೆ ಅವರೆಲ್ಲಾ ಇದನ್ನೇ ಅವಲಂಬಿಸಿಕೊಂಡಿದ್ದಾರೆ. ನಮ್ಮ ಸರ್ಕಾರ ಇದ್ದಾಗಲೆ ಇವರ ಬಗ್ಗೆ ಆಲೋಚನೆ ಮಾಡಿದೆವು. ಏನೆಂದರೆ ಸ್ಟೆರಿಫೆಂಡರಿ ಗ್ರಾಜುಯೇಟ್ಸ್ ಇದ್ದ ಹಾಗೆ ಇವರಿಗೂ ಏಕೆ ಮಾಡಬಾರದು ಎಂದು. ಆದರೆ ಈ ಸ್ಟೆರಿಫೆಂಡರಿ ಗ್ರಾಜುಯೇಟ್ಸ್‌ನವರ ಬಗ್ಗೆ ಹೈಕೋರ್ಟ್‌ನಲ್ಲಿ ರಿಟ್ ಇದ್ದು ಅದು ತೀರ್ಮಾನವಾಗಬೇಕಾದ್ದರಿಂದ ಒಂದು ತೀರ್ಮಾನಕ್ಕೆ ಬರಲಾಗಲಿಲ್ಲ. ಈಗ ಈ ಸ್ಟೆರಿಫೆಂಡರಿ ಗ್ರಾಜುಯೇಟ್ಸ್ ಬಗ್ಗೆ ಜಡ್ಜ್‌ಮೆಂಟ್ ಆಗಿದೆ. ಹಾಗೆಯೇ ಇವರನ್ನು ಪಿತಕ್ಕೆ ಖಾಯಂ ಮಾಡಬಾರದು ಎಂದು ನಾನು ಕೇಳುತ್ತೇನೆ. ಇನ್ನೊಂದು ವಿಷಯ ಏನೆಂದರೆ ಇವರಲ್ಲಿ ಶೇಕಡ ೮೦ರಷ್ಟು ಜನರು ೧೦ ವರ್ಷದಿಂದಲೂ ಬಂದೇ ಸರ್ವಾನೆ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ ಆದುದರಿಂದ ತಾವು ಇವರ ಬಗ್ಗೆ ಮಾನವೀಯತೆ ದೃಷ್ಟಿಯಿಂದಲಾದರೂ ನೋಡಿ ಇವರನ್ನು ಖಾಯಂ ಮಾಡುವುದು ಒಳ್ಳೆಯದು ಎಂದು ಹೇಳುತ್ತೇನೆ. ಅಲ್ಲದೆ ಈಗ ಪ್ರತಿಯೊಂದು ಜಿಲ್ಲೆಯಲ್ಲೂ ಕೂಡ ಈ ರೇಷ್ಮೆ ಕಾರ್ಯ ವಿಸ್ತರಣೆಯಾಗುತ್ತಾ ಇರುವುದರಿಂದ ಇವರು ಅನೇಕ ವರ್ಷಗಳಿಂದಲೂ ಇದರಲ್ಲಿ ಚೆನ್ನಾಗಿ ದುಡಿದು ಅರಿತಿರುವುದರಿಂದ ಇವರ ಸೇವೆ ಅತ್ಯಗತ್ಯವಾಗಿ ಬೇಕಾಗಿರುವುದರಿಂದ ಇವರನ್ನು ಎಲ್ಲೇ ಪಿತಕ್ಕೆ ಖಾಯಂ ಮಾಡಬಾರದು ಎಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀಮತಿ ಚಂದ್ರಪ್ರಭಾ ಅರಸ್.—ಕೆಲವು ವಿವರಗಳನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಅದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದು ಈ ರೀತಿ ಇದೆ.—ಫಾರ್ಮರ್ ವರ್ಕರ್ಸ್, ಸುಮಾರು ೧೦–೧೫ ವರ್ಷಗಳಿಂದಲೂ ಕೆಲಸ ಮಾಡಿದಂಥಾವರು ಅವರ ಸಂಖ್ಯೆ ೧೯೫, ಕಕ್ಕೂನ್ ಮಾರ್ಕೆಟ್ಸ್ ಮತ್ತು ಎಕ್ಸ್‌ಚೇಂಜ್‌ನಲ್ಲಿ ವರ್ಕ್ ಮಾಡಬೇಕಂಥಾವರು ೫೮೦ ಜನರು ಇದ್ದಾರೆ. ಗ್ರೈನೇಜ್‌ನಲ್ಲಿ ವರ್ಕ್ ಮಾಡತಕ್ಕಂಥಾವರು ೮೬೦ ಜನ ಇದ್ದಾರೆ. ಕೆಲವರು ಆಲ್ಲಿ ೨ ವರ್ಷ ೪ ವರ್ಷದೊಳಗೆ ಕೆಲಸ ಮಾಡತಕ್ಕಂಥಾವರು ಇದ್ದಾರೆ. ಮಾತ್ ಟೆಸ್ಟರ್ಸ್ ೪೦೦ ಜನ ಇದ್ದಾರೆ. ಸುಮಾರು ೫ ವರ್ಷದಿಂದ ಆಥವಾ ಅದಕ್ಕಿಂತ ಸ್ವಲ್ಪ ಕಡಿಮೆ ವರ್ಷದಿಂದ ಅವರು ಕೆಲಸ ಮಾಡುತ್ತಿದ್ದಾರೆ. ಆಮೇಲೆ ಚಾಪಿಂಗ್ ಬಾಯ್ಸ್ ಮತ್ತು ಟೆಕ್ನಿಕಲ್ ಸರ್ವಿಸ್ ಕೆಂಟರ್ನ್‌ನಲ್ಲಿ ವರ್ಕ್ ಮಾಡುತ್ತಾ ಇರುವವರು ೨೮೦೦ ಮಂದಿ ಇದ್ದಾರೆ. ಅವರು ೩ ವರ್ಷ ಆಥವಾ ೩ ವರ್ಷದಿಂದ ಕೆಳಗೆ ಕೆಲಸ ಮಾಡುತ್ತಾ ಇದ್ದಾರೆ. ಆಮೇಲೆ ಎಕ್ಸ್‌ಟೆನ್‌ಷನ್ ಫಾರ್ಮರ್ಸ್ ೯೦೦ ಜನ ಕೆಲಸ ಮಾಡುತ್ತಾ ಇದ್ದಾರೆ. ಇವರೆಲ್ಲಾ ರೈತರು ೨೦೦ ರೂಪಾಯಿನ ಒಂದು ಗೌರವಧನದ ಮೇಲೆ ಕೆಲಸ ಮಾಡುತ್ತಿದ್ದಾರೆ. ಇನ್ನು ರೇಷ್ಮೆ ಇಲಾಖೆಯಲ್ಲಿರುವ ವಿಸ್ತರಣಾ ರೈತರನ್ನು ಕ್ರಮಬದ್ಧಗೊಳಿಸಲಲ್ಲವೇ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಅದರ ಬಗ್ಗೆಯೂ ಕೂಡ ಪರಿಶೀಲನೆಯನ್ನು ನಡೆಯುತ್ತಿದೆ. ಅದು ಏನೆಂದರೆ ರೇಷ್ಮೆ ಇಲಾಖೆಯ ಪ್ರತಿ ತಾಂತ್ರಿಕ ಸೇವಾ ಕೇಂದ್ರಕ್ಕೆ ೮–೧೦ ಚಾಕಿ ಕೇಂದ್ರಗಳನ್ನು ಸೇರಿಸಲಾಗಿದೆ. ಪ್ರತಿ ಚಾಕಿ ಕೇಂದ್ರದಲ್ಲಿಯೂ ಒಬ್ಬ ಪ್ರಗತಿಪರ ರೈತರಿದ್ದಾರೆ. ಸ್ಥಳೀಯ ರೇಷ್ಮೆ ಬೆಳಗಾರರನ್ನೊಳಗೊಂಡ ಚಾಕಿ ಸಾಕಣೆ ಕೇಂದ್ರದ ಸಮಿತಿಯೂ ಆಲ್ಲಿರುವ ರೇಷ್ಮೆ

ಬೆಳೆಗಾರರ ಪೈಕಿ ಓದುಬರಹ ಬಲ್ಲವ ಹಾಗೂ ತಾಂತ್ರಿಕ ವಿಚಾರಗಳನ್ನು ಬೆಳೆಗಾರರಿಗೆ ತಿಳಿಯಂ ಹೇಳಬಲ್ಲ ಒಬ್ಬಾತನನ್ನು ಪ್ರಗತಿಪರ ರೈತನೆಂದು ಪರಿಗಣಿಸಿ ಚಾಕಿ ಕೇಂದ್ರಕ್ಕೆ ಆಯ್ಕೆ ಮಾಡುವರು. ಅಂತಹವರಿಗೆ ಮಾಸಿಕವಾಗಿ ೨೦೦ ರೂಪಾಯಿಗಳ ಗೌರವಧನವನ್ನು ನೀಡಲಾಗುತ್ತದೆ. ಅವರಂ ರೈತರೇ ಹೊರತು ಇಲಾಖೆಯು ನೇಮಿಸಿಕೊಂಡ ಕೆಲಸಗಾರರಲ್ಲ. ಆದುದರಿಂದ ಅವರನ್ನು ಇಲಾಖೆಯಲ್ಲಿ ಕ್ರಮಬದ್ಧಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳುತ್ತೇನೆ. ಇನ್ನು ಮಾನ್ಯ ಸದಸ್ಯರು ಮಾನವೀಯತೆಯ ದೃಷ್ಟಿ ಇರಬೇಕು ಎಂದು ಹೇಳಿದ್ದಾರೆ. ಅದು ಬೇರೆ ಪ್ರಶ್ನೆ. ಇದು ರೇಷ್ಮೆ ಇಲಾಖೆಯಲ್ಲೇ ಒಂದರಲ್ಲೇ ಇಲ್ಲ, ಲೋಕೋಪಯೋಗಿ ಇಲಾಖೆಯಲ್ಲಿ, ವ್ಯವಸಾಯ ಇಲಾಖೆಯಲ್ಲಿ ಹಾರ್ಟಿಕಲ್ಚರ್ ಇಲಾಖೆಯಲ್ಲಿ ಈ ಸಮಸ್ಯೆಗಳು ಇವೆ. ಅಲ್ಲಿ ಇರುವವರು ಕೂಡ ದಿನಗೂಲಿ ಕೆಲಸದ ಮೇಲೆ ಕೆಲಸ ಮಾಡುತ್ತಾ ಇದ್ದಾರೆ. ಆದುದರಿಂದ ಇದೊಂದಕ್ಕೇನೇ ಒಂದು ಕಾನೂನು ನೀತಿ ಅಂತ ಒಳಪಡುವುದಿಲ್ಲ. ಆದರೆ ಒಂದು ಕೆಲಸ ಮಾಡಬಹುದು ಈ ಇಲಾಖೆಯಲ್ಲಿ ಯಾರು ಎಸ್.ಎಸ್.ಎಲ್.ಸಿ. ಪಾಸಾಗಿದ್ದಾರೋ ಯಾರು ಪದವೀಧರರು ಆಗಿದ್ದಾರೋ ಅವರು ಈ ಇಲಾಖೆಯಲ್ಲಿ ಅರ್ಜಿ ಕರೆದಾಗ ಅಪ್ಲಿಕೇಷನ್ಸ್ ಹಾಕಿಕೊಳ್ಳಬಹುದು. ಆಗ ಅವರಿಗೆ ವಯೋಮಿತಿಯನ್ನು ಸ್ವಲ್ಪ ಸಡಿಲಗೊಳಿಸುವುದಕ್ಕೆ ಪ್ರಯತ್ನ ಮಾಡಬಹುದು. ಅದಕ್ಕೇನೂ ಅಭ್ಯಂತರವಿಲ್ಲ. ಆಗ ಅವರಿಗೆ ಆ ಬಗ್ಗೆ ಎಲ್ಲಾ ಅರ್ಹತೆ ಇದ್ದರೆ ಮಾನ್ಯತೆಯೂ ಕೂಡ ಸಿಕ್ಕುತ್ತದೆ. ಈ ಬಗ್ಗೆ ಮೂಲಪ್ರಶ್ನೆ ಏನು ಇತ್ತು ಅನ್ನುವುದನ್ನೂ ಕೂಡ ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ. ಹಿಂದೆ ೧೯೭೯-೮೯ರಲ್ಲಿ ರೇಷ್ಮೆ ಹುಳುಗಳ ಬೆಳೆಗಳಲ್ಲಿ ಗಂಟು ರೋಗವು ಹೆಚ್ಚಿನ ಪ್ರಮಾಣದಲ್ಲಿ ಕಂಡು ಬಂದುದರಿಂದ ರಾಜ್ಯದಲ್ಲಿರುವ ಎಲ್ಲಾ ಬಿತ್ತನೆ ಕೇಂದ್ರಗಳಲ್ಲಿ ಪ್ಯೂಪಾ ಮತ್ತು ಚಿಟ್ಟೆಗಳ ಪರೀಕ್ಷೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಕೈಗೊಳ್ಳಬೇಕಾಯಿತು. ಆ ಸಂದರ್ಭದಲ್ಲಿ ಈ ರೇಷ್ಮೆ ಇಲಾಖೆಯಲ್ಲಿ ಹಂಗಾಮಿ ಕೆಲಸದಲ್ಲಿರುವ ಚಿಟ್ಟೆ ಪರೀಕ್ಷಕರು ತಮ್ಮದೇ ಆದ ಒಂದು ಸಂಘವನ್ನು ರಚಿಸಿಕೊಂಡು ಕೆಲವು ಸೌಲಭ್ಯಗಳನ್ನು ಮಾಡಿದ್ದಾರೆ. ಅದೇನೆಂದರೆ ಮೊದಲನೆಯದಾಗಿ ನಾವು ಸಲ್ಲಿಸಿರುವ ಸೇವೆ ಹಾಗೂ ವಿದ್ಯಾರ್ಹತೆಗಳಿಗೆ ಅನುಗುಣವಾಗಿ ಇಲಾಖೆಯಲ್ಲಿ ಖಾಲಿ ಇರುವ ಸಿರಿಕಲ್ಚರ್ ಡೆಮಾನ್‌ಸ್ಟ್ರೇಟರ್ ಮೊದಲಾದ ಹುದ್ದೆಗಳಿಗೆ ತಂಬುವುದರ ಮೂಲಕ ನಮ್ಮನ್ನು ಖಾಯಂ ಮಾಡುವುದು ಎರಡನೆಯದಾಗಿ ಚಿಟ್ಟೆ ಪರೀಕ್ಷಕರದೇ ಹೊಸ ಹುದ್ದೆಯನ್ನು ಮಾಡುವುದಾದರೆ ಎಲ್ಲರನ್ನೂ ಒಟ್ಟಿಗೆ ೩೫೦-೪೦೦ರ ಶ್ರೇಣಿಯಲ್ಲಿ ಖಾಯಂ ಮಾಡುವುದು. ಮೂರನೆಯದಾಗಿ ಹೊಸ ಹುದ್ದೆ ಸೃಷ್ಟಿಸಲು ಸಾಧ್ಯವಾಗದಿದ್ದರೆ ಕಾನೂನಿನ ತೊಡಕನ್ನು ನಿವಾರಿಸಿ ಪದವೀಧರರನ್ನೆಲ್ಲಾ ಸಿರಿಕಲ್ಚರಲ್ ಡೆಮಾನ್‌ಸ್ಟ್ರೇಟರುಗಳನ್ನಾಗಿಯೂ ಉಳಿದವರನ್ನು ಸಿರಿಕಲ್ಚರಲ್ ಆಪರೇಟಿವ್‌ಗಳಾಗಿಯೂ ಪರಿವರ್ತಿಸಿ ಖಾಯಂ ಮಾಡುವುದು. ಈ ರೀತಿಯಾಗಿ ಅವರುಗಳು ಸಲಹೆ ಕೊಟ್ಟಿದ್ದಕ್ಕೆ ಹಿಂದಿನ ಮಾನ್ಯ ಮಂತ್ರಿಗಳೇ ಉತ್ತರ ಕೊಟ್ಟಿರುವುದು ಈ ರೀತಿ ಇದೆ. ಏನೆಂದರೆ "ಇಲಾಖೆಯಲ್ಲಿರುವ ಸಿರಿಕಲ್ಚರಲ್ ಆಪರೇಟಿವ್ ಮತ್ತು ಡೆಮಾನ್‌ಸ್ಟ್ರೇಟರುಗಳಿಗೆ ಇತರ ಕೆಲಸಗಳ ಜೊತೆಗೆ ಪ್ಯೂಪಾ ಮತ್ತು ಚಿಟ್ಟೆ ಪರೀಕ್ಷಿಸುವುದು ಅವರ ಕರ್ತವ್ಯವಾಗಿರುತ್ತದೆ. ಈ ಹುದ್ದೆಗಳಲ್ಲಿ ಅನೇಕ ಸ್ಥಾನಗಳು ಖಾಲಿಯಿದ್ದುದರಿಂದ ತಾತ್ಕಾಲಿಕವಾಗಿ ನೇಮಿಸಿಕೊಂಡು ಈ ಕೆಲಸಗಾರನ್ನು ಪ್ಯೂಪಾ ಮತ್ತು ಚಿಟ್ಟೆಗಳ ಸೂಕ್ಷ್ಮದರ್ಶಕ ಪರೀಕ್ಷೆಗೋಸ್ಕರ ಮುಂದುವರೆಸಲಾಗಿದೆ ಇತ್ತೀಚೆಗೆ ಖಾಲಿಯಿರುವ ಸಿರಿಕಲ್ಚರ್ ಆಪರೇಟೀವ್ ಮತ್ತು ಡೆಮಾನ್‌ಸ್ಟ್ರೇಟರ ಹುದ್ದೆಗಳನ್ನು ಭರ್ತಿ ಮಾಡುವ ಕಾರ್ಯ ಕೈಗೊಂಡಿದೆ. ಈ ಹುದ್ದೆಗಳನ್ನು ಭರ್ತಿ ಮಾಡಿದ ಕೂಡಲೇ ತಾತ್ಕಾಲಿಕವಾಗಿ ನೇಮಿಸಿ ಕೊಂಡಿರುವ ಚಿಟ್ಟೆ ಪರೀಕ್ಷಕರನ್ನು ತೆಗೆಯಬೇಕಾಗುವುದು. ಆಗಾಗ್ಗೆ ಇಲಾಖೆ ಅರ್ಜಿಗಳನ್ನು ಕರೆದಾಗ ಅರ್ಹತೆಯಿರುವವರು ಯಾವುದಾದರೂ ಹುದ್ದೆಗೆ ಅರ್ಜಿ ಹಾಕಬಹುದು. ಈ ಮೇಲೆ ಹೇಳಿದ ಕಾರಣಗಳಿಂದ ತಾತ್ಕಾಲಿಕವಾಗಿ ತೆಗೆದುಕೊಂಡಿದ್ದ ಚಿಟ್ಟೆ ಪರೀಕ್ಷಕರ ಸೇವೆಯನ್ನು ಖಾಯಂಗೊಳಿಸಲು ಸಾಧ್ಯವಾಗುವುದಿಲ್ಲ." ಎಂದು ಮೊದಲೇ ಉತ್ತರಿಸಿದ್ದಾರೆ, ಇನ್ನು ಈ ಬಗ್ಗೆ ಮಾನವೀಯತೆ ದೃಷ್ಟಿಯಿಂದ ನೋಡಬೇಕು ಎಂದು ಹೇಳಿದ್ದಾರೆ. ಅದು ಬೇರೆ ಪ್ರಶ್ನೆಯಾಯಿತು. ಅದನ್ನು ಸರ್ಕಾರ ಪರ್ಯಾಲೋಚನೆ ಮಾಡುತ್ತದೆ. ಆದರೆ ಒಂದು ಮಾತು, ಈ ಸಮಸ್ಯೆ ಈ ಒಂದೇ ಇಲಾಖೆಗೆ ಸಂಬಂಧಪಟ್ಟದ್ದಲ್ಲ. ಕೆಲವು ಇಲಾಖೆಗಳಲ್ಲಿ ಹೀಗೆಯೇ ಇದೆ. ಒಂದು ಇಲಾಖೆಯಲ್ಲಿ ಯಾರು ಈ ರೀತಿಯಾಗಿ ಹೆಚ್ಚು ವರ್ಷಗಳ ಕಾಲ ಕೆಲಸ ಮಾಡಿರುತ್ತಾರೆಯೋ ಅವರಿಗೆ ಈಗ ಇರತಕ್ಕಂಥ ಕಾನೂನು ಪರಿಮಿತಿಯೊಳಗೆ ಅವರನ್ನು ಹಾಗೆಯೇ ನೇರವಾಗಿ ನೇಮಕ ಮಾಡುವುದಕ್ಕೆ ಬರುವುದಿಲ್ಲ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಇದನ್ನು ಪರ್ಯಾಲೋಚನೆ ಮಾಡುತ್ತೇನೆಂದು ಹೇಳಿದರಲ್ಲಾ, ಇವರೇನೂ ಹೊಸದಾಗಿ ನೇಮಕವಾದವರಲ್ಲ. ಹಿಂದಿನಿಂದ ಬಹಳ ವರ್ಷದಿಂದಲೂ ಕೆಲಸ ಮಾಡಿಕೊಂಡು ಬಂದಂಥಾವರು ಇವರನ್ನು ತೆಗೆಯದೇ ಇರುವುದಕ್ಕೆ ಏನು ಆರ್ಡರ್ ಮಾಡುತ್ತೀರಾ ? ಈ ಹಾರ್ಟಿಕಲ್ಚರ್ ಇಲಾಖೆ ಏನು ಇದೆ ಇದು ಮುಂದಿನ ಬೆಳವಣಿಗೆ ಆಗತಕ್ಕಂಥಾ ಒಂದು ಇಲಾಖೆ. ಇದರಲ್ಲಿಯೂ ಕೂಡ ಅವರು ಬಹಳ ಹೆಚ್ಚಿನ ಅನುಭವವನ್ನು ಪಡೆದಿದ್ದಾರೆ. ಅಲ್ಲದೆ ಇಲ್ಲಿರತಕ್ಕಂಥಾವರೆಲ್ಲಾ ಬಹಳ ಬಡವರೇ ಇವೆರಡನ್ನೂ ತಾವು ಗಮನದಲ್ಲಿಟ್ಟುಕೊಂಡು ಅವರನ್ನು ನಿರ್ದಿಷ್ಟವಾಗಿ ಖಾಯಂ ಮಾಡುತ್ತೇವೆ, ಅವರನ್ನು ನಿವೃತ್ತಿಗೊಳಿಸುವುದಿಲ್ಲ ಅನ್ನುವ ಆಶ್ವಾಸನೆಯನ್ನು ಕೊಡುತ್ತೀರಾ ?

ಶ್ರೀಮತಿ ಚಂದ್ರಪ್ರಭಾ ಅರಸ್.—ತಾವು ಹೇಳಿದ ವಿಷಯವನ್ನು ಗಮನದಲ್ಲಿಟ್ಟುಕೊಂಡು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ತಾವು ಈಗಾಗಲೇ ಹೇಳಿದ ಹಾಗೆ ೧೦–೧೫ ವರ್ಷಗಳಿಂದಲೂ ಕೆಲಸ ಮಾಡಿದಂಥಾವರ ಸಂಖ್ಯೆ ೧೯೫ ಮತ್ತು ಗ್ರೈನೇಜ್‌ನಲ್ಲಿ ವರ್ಕ್ ಮಾಡತಕ್ಕಂಥಾವರು ೭೬೦ ಮತ್ತು ಕಕ್ಕೂನ್ ಮಾರ್ಕೆಟ್ಸ್‌ನಲ್ಲಿ ಮತ್ತು ಎಕ್ಚ್ಸೇಂಜ್‌ನಲ್ಲಿ ಕೆಲಸ ಮಾಡತಕ್ಕಂಥಾವರು ೫೮೦ ಜನ ಏನು ಇದ್ದಾರೆ. ಇವರ ಅವಶ್ಯಕತೆ ಇರುವುದರಿಂದಲೇ ಅಷ್ಟು ವರ್ಷಗಳಿಂದಲೂ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ. ಅಲ್ಲವೇ ? ಈಗ ಇವರ ಅವಶ್ಯಕತೆ ಬೇಕು ಅನ್ನುವುದಾದರೆ ಕೇಡರ್ ಆಂಡ್ ರೆಕ್ರೂಟ್‌ಮೆಂಟ್ಸ್ ಅನ್ನು ಬದಲಾವಣೆ ಮಾಡಿಯಾದರೂ ಯಾರಿಗೆ ಅರ್ಹತೆ ಇದೆ, ಹೈಕೋರ್ಟಿನಲ್ಲಿ ಈ ಸ್ಟೆಫಂಡರಿ ಗ್ರಾಜುಯೇಟ್ಸ್ ಬಗ್ಗೆ ಜಡ್ಜ್‌ಮೆಂಟ್ ಏನು ತೀರ್ಮಾನವಾಗಿದೆಯೋ ಅದೇ ರೀತಿ ಇದನ್ನೂ ಮಾಡಿ. ಈಗ ತಾವು ಈ ಇಲಾಖೆಗೆ ವರ್ಲ್ಡ್ ಬ್ಯಾಂಕ್‌ನ ಹಣ ತೆಗೆದುಕೊಂಡು ಎಕ್ಸ್‌ಪ್ಯಾಂಡ್ ಮಾಡುತ್ತಿದ್ದೀರಿ. ಆದುದರಿಂದ ನಾನು ಹೇಳುವುದೇನೆಂದರೆ ಇವರಿಗೆಲ್ಲಾ ೧೦–೧೫ ವರ್ಷಗಳ ಅನುಭವ ಇರುವುದರಿಂದ ಇವರನ್ನು ಆ ಜಾಗಕ್ಕೆ ನೇಮಕ ಮಾಡಿಕೊಂಡರೆ ಒಳ್ಳೆಯದು. ತಮಗೆ ಹೇಳಬೇಕಾದರೆ ಈ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟಿನಲ್ಲಿ ಗಿಡಗಳಿಗೆ ನೀರು ಹುಯ್ಯುವ ಹೆಣ್ಣು ನುಕ್ಕಳು ೧೦–೧೨ ವರ್ಷ ಸರ್ವೀಸ್ ಮಾಡಿದ್ದರೂ ಕೂಡ ಅವರನ್ನೂ ಇನ್ನೂ ಖಾಯಂ ಮಾಡಿಲ್ಲ. ಸರ್ಕಾರದಲ್ಲಿ ಈ ಬಗ್ಗೆ ಅವರನ್ನು ಖಾಯಂ ಮಾಡುವುದಕ್ಕೆ ಕಾನೂನು ಏನಾದರೂ ಇಲ್ಲವೇ ? ಅಥವಾ ಮಂತ್ರಿಗಳೇನಾದರೂ ಇದರ ಬಗ್ಗೆ ಅಭ್ಯಾಸ ಮಾಡಿಲ್ಲವೋ ಏನೋ ನನಗೆ ಗೊತ್ತಿಲ್ಲ. ತಾವು ಆ ಕಾನೂನನ್ನು ತರಿಸಿಕೊಂಡು ಚೆನ್ನಾಗಿ ಅಭ್ಯಾಸ ಮಾಡಿಕೊಂಡು ಆ ಬಗ್ಗೆ ಕಾನೂನಾದರೂ ಬದಲಾವಣೆ ಮಾಡಿ ಅವರನ್ನು ನೇಮಕ ಮಾಡಿಕೊಳ್ಳತಕ್ಕಂಥಾದ್ದು ಒಳ್ಳೆಯದು. ಆ ವಿಚಾರದಲ್ಲಿ ತಾವು ಸೂಕ್ತ ಕ್ರಮ ಕೈಗೊಂಡು ಅವರಿಗೆಲ್ಲರಿಗೂ ಉದ್ಯೋಗ ದೊರಕಿಸಿ ಕೊಡುವ ಹಾಗೆ ಮಾಡಿಕೊಡಬೇಕು ಎಂದು ನಾನು ಕೇಳುತ್ತೇನೆ.

ಶ್ರೀಮತಿ ಚಂದ್ರಪ್ರಭಾ ಅರಸ್.—ತಾವು ಹೇಳುವುದನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ. ನಾನು ಮೊದಲೇ ಹೇಳಿದ ಹಾಗೆ ಇದು ಒಂದೇ ಇಲಾಖೆಯಲ್ಲ. ಬೇರೆ ಇತರೇ ಇಲಾಖೆಗಳೂ ಸೇರುತ್ತವೆ. ಇದು ಸರ್ಕಾರದ ಒಂದು ಬೃಹತ್ ಸಮಸ್ಯೆಯಾಗಿದೆ, ಸರ್ಕಾರವೂ ಕೂಡ ಇದರ ಬಗ್ಗೆ ಆಲೋಚನೆ ಮಾಡುತ್ತಾ ಇದೆ. ಈ ಎಲ್ಲಾ ಸಲಹೆಗಳನ್ನೂ ಕೂಡ ಗಮನದಲ್ಲಿಟ್ಟುಕೊಂಡು ಸರ್ಕಾರ ಇದಕ್ಕೆ ಸಮಗ್ರವಾದ ಒಂದು ತಿದ್ದುಪಡಿಯನ್ನು ತಂದು ಮಾಡಬೇಕಾಗಿದೆ. ಈ ದಿಕ್ಕೆಯಲ್ಲಿ ಅಗತ್ಯವಾದ ಎಲ್ಲಾ ಕಾರ್ಯಕ್ರಮಗಳನ್ನು ಸರ್ಕಾರ ಕೈಗೊಳ್ಳುವುದಕ್ಕೆ ಈಗಾಗಲೇ ಪರಿಶೀಲನೆ ಮಾಡುತ್ತಾ ಇದೆ ಎಂದು ಮಾತ್ರ ನಾನು ಹೇಳುಯಸಂತ್ತೇನೆ.

೨–೦೦ ಪಿ. ಎಂ.

ಶ್ರೀ ಮಹದೇವ್. —ರೇಷ್ಮೆ ಇಲಾಖೆಯಲ್ಲಿ ಹಂಗಾಮಿಯಾಗಿ ಕೆಲಸ ಮಾಡತಕ್ಕವರು ಗ್ರಾಮಾಂತರ ಪ್ರದೇಶದ ಜನ. ಇವರು ಬಹಳ ಬಡವರು, ಮತ್ತು ಹರಿಜನರು ಇರುತ್ತಾರೆ. ನಮಗೆಲ್ಲರಿಗೂ ತಿಳಿದಿರುವ ಹಾಗೆ ಕರ್ನಾಟಕ ರಾಜ್ಯದಲ್ಲಿ ರೇಷ್ಮೆಗೆ ಬಹಳ ಪ್ರಾಮುಖ್ಯತೆ ಇದೆ. ಹಂಗಾಮಿಯಲ್ಲಿ ಕೆಲಸ ಮಾಡತಕ್ಕ ಜನರಿಗೆ ಇಲಾಖೆಯ ಅಧಿಕಾರಿಗಳಿಂದ ಕಿರುಕುಳ ಇದೆಯೆಂದು ಕೇಳಿದ್ದೇನೆ. ಸರ್ಕಾರದವರು ಇದರ

ಬಗ್ಗೆ ಗಮನ ಕೊಡಬೇಕು. ಅವರುಗಳು ನನಗೆ ಒಂದು ಮನವಿಪತ್ರವನ್ನೂ ಸಹ ಕೊಟ್ಟಿದ್ದಾರೆ. ಇದರ ಬಗ್ಗೆ ತಾವು ಇಲಾಖೆಯ ಅಧಿಕಾರಿಗಳಿಗೆ ಸೂಕ್ತ ಎಚ್ಚರಿಕೆಯನ್ನು ಕೊಡಬೇಕು. ಇದರ ಜೊತೆಗೆ ಇಲ್ಲಿ ಕೆಲಸ ಮಾಡುತ್ತಿರುವ ಪದವೀಧರರನ್ನು ಟರ್ಮಿನೇಟ್ ಮಾಡದ ಹಾಗೆ ತಾವು ನೋಡಿ ಕೊಳ್ಳಬೇಕು. ಈ ಇಲಾಖೆಯಲ್ಲಿ ಎಷ್ಟು ಜನ ಪದವೀಧರರು ಇದ್ದಾರೆ? ಅವರೆಲ್ಲಾ ಹತ್ತಾರು ವರ್ಷ ಗಳಿಂದ ಹಂಗಾಮಿ ನೌಕರರಾಗಿ ಕೆಲಸ ಮಾಡಿ. ಬೇರೆ ಕಡೆಯಲ್ಲಿ ಕೆಲಸ ಮಾಡುವುದಕ್ಕೆ ವಯೋಮಿತಿ ವಿುೀರಿರುತ್ತಾರೆ. ಇಂಥವರಿಗೆ ತಾವು ಪ್ರಾಧಾನ್ಯತೆ ಕೊಟ್ಟು ಇಲಾಖೆಯಲ್ಲಿ ಅಧಿಕಾರಿಗಳಿಂದ ತೊಂದರೆ ಆಗದ ಹಾಗೆ ನೋಡಿಕೊಳ್ಳಬೇಕು ಮತ್ತು ಅವರಿಗೆ ಎಲ್ಲಾ ಸವಲತ್ತುಗಳನ್ನು ಕೊಡಬೇಕು ಎಂಬು ದನ್ನು ನಾನು ಈ ಸಂದರ್ಭದಲ್ಲಿ ಮಾನ್ಯ ಸಚಿವರ ಗಮನಕ್ಕೆ ತಂದು ಅವರ ಬೇಡಿಕೆಗಳನ್ನು ಈಡೇರಿಸಿ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಚಂದ್ರಪ್ರಭಾ ಅರಸ್.—ಮಾನ್ಯ ಸದಸ್ಯರು ಈ ಇಲಾಖೆಯಲ್ಲಿ ಇರುವ ಪದವೀಧರರು ಸಂಖ್ಯೆ ಎಷ್ಟಿದೆ ಎನ್ನುವ ಅಂಶವನ್ನು ಕೇಳಿದ್ದಾರೆ ಆ ಒಂದು ಅಂಕಿ ಅಂಶ ನನ್ನಲ್ಲಿಲ್ಲ. ಮಾನ್ಯ ಸದಸ್ಯರಿಗೆ ಅದನ್ನು ನಂತರ ಒದಗಿಸಿಕೊಡುತ್ತೇನೆ. ಈ ಹಂಗಾಮಿ ನೌಕರರು ಚಳುವಳಿ ಮಾಡುತ್ತಿದ್ದ ಸಮಯ ದಲ್ಲಿ ನಾವು ಅವರನ್ನು ಕರೆಯಿಸಿ ಅವರ ಸಮಸ್ಯೆಗಳ ಬಗ್ಗೆ ಕೂಲಂಕುಷವಾಗಿ ಚರ್ಚೆ ಮಾಡಿದ್ದೇವೆ. ಇದರಲ್ಲಿ ತಾಂತ್ರಿಕ ತೊಂದರೆಗಳು ಏನಾದರೂ ಇದ್ದಲ್ಲಿ ಅದನ್ನು ಬದಲಾವಣೆ ಮಾಡುವುದಕ್ಕೂ ಕೂಡ ಈಗಾಗಲೇ ನಾವು ವರದಿಯನ್ನು ಸಂಬಂಧಪಟ್ಟವರಿಂದ ಪಡೆಯುವವರಿದ್ದೇವೆ. ಅದೇ ರೀತಿಯಲ್ಲಿ ಯಾವ ಯಾವ ಕ್ಷೇತ್ರದಲ್ಲಿ ಈ ಹಂಗಾಮಿ ನೌಕರರು ಕೆಲಸ ಮಾಡುತ್ತಿದ್ದಾರೆ ಅವರೆಲ್ಲರ ಬಗ್ಗೆ ಸರ್ಕಾರ ಸಾಧ್ಯವಾದಷ್ಟು ಕೂಡ ರಕ್ಷಣೆ ಕೊಡುವ ಎಲ್ಲಾ ಸವಲತ್ತುಗಳನ್ನು ಕೊಡಬುದಕ್ಕೆ ಪ್ರಯತ್ನ ಮಾಡುತ್ತದೆಂದು ನಾನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಭರವಸೆಯನ್ನು ಕೊಡುತ್ತೇನೆ.

ಶ್ರೀ ಮುನಿಯಪ್ಪ.—ಈ ಇಲಾಖೆಯಲ್ಲಿ ಕೆಲಸ ಮಾಡತಕ್ಕವರಿಗೆ ದಿನಗೂಲಿಯನ್ನೂ ಸಹ ನಿಗದಿ ಮಾಡಿಲ್ಲ ಇಲ್ಲಿ ಕೆಲಸ ಮಾಡುತ್ತಿರುವ ಎಕ್ಸ್‌ಟೆನ್‌ಷನ್ ಆಫೀಸರ್ಸ್ ಎಂದು ಏನು ಇದ್ದಾರೆ ಅವರುಗಳೂ ಸಹ ದಿನಗೂಲಿಯ ಮೇಲೆ ಕೆಲಸ ಮಾಡುತ್ತಿದ್ದಾರೆ. ರೆಕ್ರೂಟ್‌ಮೆಂಟ್ ಮಾಡುವಾಗ ಇವರ ಸೇವೆಯನ್ನು ಖಾಯಂಗೊಳಿಸುವುದಕ್ಕೆ ಸ್ಪಷ್ಟವಾದ ಆದೇಶವನ್ನು ಕೊಡುವಿರಾ ?

ಶ್ರೀ ಮಹದೇವ್.—ಇದಕ್ಕೆ ಸಂಬಂಧಪಟ್ಟಂತೆ ನಾನು ಇನ್ನೊಂದು ವಿಷಯವನ್ನು ಹೇಳಬಯಸುತ್ತೇನೆ. ರೈತರು ರೇಷ್ಮೆ ಗೂಡನ್ನು ಮಾರ್ಕೆಟ್‌ಗೆ ತೆಗೆದುಕೊಂಡು ಹೋದಾಗ ಅವರಿಗೆ ಕೂಡಲೇ ಪೇಮೆಂಟ್ ಆಗುವುದಿಲ್ಲ. ಅಲ್ಲಿಯ ಏಜೆಂಟರುಗಳು ರೈತರಿಂದ ಗೂಡನ್ನು ತಗೆದುಕೊಂಡು ಹಣಕ್ಕಾಗಿ ರೈತರನ್ನು ಅಲೆದಾಡಿಸುತ್ತಾರೆ. ಇದನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ರೈತರಿಗೆ ಮಾರ್ಕೆಟ್ಟಿನಲ್ಲಿ ಅವರ ಗೂಡಿಗೆ ಸರಿಯಾದ ರೀತಿಯಲ್ಲಿ ಕೂಡಲೇ ಹಣ ದೊರಕುವ ಹಾಗೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ನಮ್ಮ ರಾಜ್ಯದಲ್ಲಿ ಹಂಗಾಮಿ ನೌಕರರಾಗಿ ಕೆಲಸ ಮಾಡುತ್ತಿರುವ ಹಾಗೆ ಸೆಂಟ್ರಲ್ ಸಿಲ್ಕ್ ಬೋರ್ಡ್‌ನಲ್ಲಿಯೂ ಸಹ ಸುಮಾರು ಎರಡು ಸಾವಿರ ಜನ ಕೆಲಸ ಮಾಡುತ್ತಿದ್ದರು. ಇತ್ತೀಚೆಗೆ ಅವರು ತಮ್ಮ ರೂಲ್ಸ್‌ಗಳನ್ನು ಸಡಿಲ ಮಾಡಿ ಅವರ ಸೇವೆಯನ್ನು ಖಾಯಂ ಗೊಳಿಸಿದ್ದಾರೆ. ಇದೇ ರೀತಿಯಲ್ಲಿ ತಾವು ನಮ್ಮ ರಾಜ್ಯದಲ್ಲಿ ರೇಷ್ಮೆ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಹಂಗಾಮಿ ನೌಕರರ ಸೇವೆಯನ್ನು ಖಾಯಂ ಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀಮತಿ ಚಂದ್ರಪ್ರಭಾ ಅರಸ್.—ಮಾನ್ಯ ಸದಸ್ಯರ ಸಲಹೆಯನ್ನು ನಾವು ಗಮನದಲ್ಲಿಟ್ಟು ಕೊಳ್ಳುತ್ತೇವೆ. ಮಾನ್ಯ ಸದಸ್ಯರಾದ ಮಹದೇವ್ ಅವರು ರೈತರಿಗೆ ಮಾರ್ಕೆಟ್ಟಿನಲ್ಲಿ ತೊಂದರೆ ಯಾಗುತ್ತಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಅದರ ಬಗ್ಗೆಯೂ ಕೂಡ ನಾವು ಅವರಿಗೆ ಏನು ಬೆಲೆ ಸಿಕ್ಕಬೇಕೋ ಅದನ್ನು ಸಿಕ್ಕುವ ಹಾಗೆ ಮಾಡಿ, ಬಾಕಿ ವಿಷಯಗಳ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.